ಪ್ರಾಚೀನ ಸಾಹಿತ್ಯಕ್ಕೆ ಧರ್ಮಕೂಡ ಪ್ರೇರಣೆಯಾಗಿರುತ್ತದೆ. ಕೆಲವು ಕವಿಗಳು ತಮ್ಮ ಧರ್ಮವನ್ನು ಉತ್ಕರ್ಷಿಸುವ ಸಲುವಾಗಿ ಅನ್ಯಧರ್ಮವನ್ನು ವಿಡಂಬಿಸುತ್ತಾರೆ, ನಿಂದಿಸುತ್ತಾರೆ. ಅಂತಹ ಸಂದರ್ಭದಲ್ಲಿ ಸಂಪಾದಕ ಕವಿಯ ಪರವಾಗಿ ವಕಾಲತ್ತು ಮಾಡದೆ ಒರೆಗೆ ಹಚ್ಚಬೇಕಾಗುತ್ತದೆ.

